# ಸುದ್ದಿ ಸಂಚಯ

## ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ವೇದ ಪುರಾಣಗಳ ಡಿ.ವಿ.ಡಿ. ಬಿಡುಗಡೆ



ಎಡದಿಂದ, ಸ್ವಾಮಿ ಶಾಂತಿಮಯಾನಂದಜಿ, ಪ್ರೊ. ಯೋಗಾನಂದ, ಸ್ವಾಮಿ ಹರ್ಷಾನಂದಜಿ, ಶ್ರೀ ಗಣೇಶ್

**ಶ್ರೀ** ಜಯಚಾಮರಾಜೇಂದ್ರ ಗ್ರಂಥರತ್ನ ಮಾಲೆಯಲ್ಲಿ ೩೬ ಸಂಪುಟಗಳಲ್ಲಿ ಬಿಡುಗಡೆಯಾದ ಋಗ್ವೇದ ಸಂಹಿತೆ ಮತ್ತು ೧೭೯ ಸಂಪುಟಗಳಲ್ಲಿ ಪ್ರಕಟವಾದ ೨೪ ಪುರಾಣಗಳ ಅಂಕಾಕ್ಷರ ಅವತರಣಿಕೆಯ (ಡಿ.ವಿ.ಡಿ) ಲೋಕಾರ್ಪಣೆಯ ಕಾರ್ಯಕ್ರಮವು ಆಗಸ್ಟ್ ೩೦, ೨೦೦೯ ರ ಭಾನುವಾರ ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ಜರುಗಿತು. ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜಿ ಅವರು ಡಿ.ವಿ.ಡಿ.ಯನ್ನು ಬಿಡುಗಡೆ ಮಾಡಿ, ಆಶೀರ್ವಚನ ನೀಡಿದರು. ಸುಪ್ರಸಿದ್ಧ ವಿದ್ವಾಂಸರಾದ ಶತಾವಧಾನಿ ಗಣೇಶ್ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು.

ಸ್ವಾಮಿ ಹರ್ಷಾನಂದಜಿ ಅವರು ತಂತ್ರಜ್ಞಾನವನ್ನು ಈ ರೀತಿಯ ಸಮಾಜೋದ್ಧಾರಕ ಕಾರ್ಯಗಳಿಗೆ ಉಪಯೋಗಿಸಿರುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು. ಈ ಡಿ.ವಿ.ಡಿ.ಯು ವೇದ, ಪುರಾಣ ಸಾಹಿತ್ಯವನ್ನು ಜನರಿಗೆ ತಲುಪಿಸುವಲ್ಲಿ ತುಂಬಾ ಸಹಾಯಕವಾಗಿದೆ ಎಂದು ನುಡಿದರು. ಶ್ರೀ ಶತವಧಾನಿ ಗಣೇಶ್ ಅವರು ಆಳಿದ ಮಹಾರಾಜರಾದ ಶ್ರೀ ಜಯರಾಮರಾಜೇಂದ್ರ ಒಡೆಯರ್ ಅವರು ಈ ಗ್ರಂಥರತ್ನ ಮಾಲೆಯ ಮೂಲಕ ಮಾಡಿದ ಸಾಹಿತ್ಯ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಿದರು. ಈ ಡಿ.ವಿ.ಡಿ.ಯ ನಿರ್ಮಾಪಕರಾದ ಪ್ರೊ.ಯೋಗಾನಂದ ಅವರು ಸ್ವಾಗತ ಮತ್ತು ಪರಿಚಯ ಭಾಷಣ ಮಾಡಿದರು. ಇವರಿಗೆ ತಾಂತ್ರಿಕ ಸಹಾಯವನ್ನು ನೀಡಿರುವ ಶ್ರೀರಂಗ ಡಿಜಿಟಲ್ ಟೆಕ್ನಾಲಜೀಸ್‌ನ ವ್ಯವಸ್ಥಾಪಕರಾದ ಡಿ. ಶಿವಶಂಕರ ಅವರು ವಂದನಾರ್ಪಣೆ ಮಾಡಿದರು.

## ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಯುವಸಮಾವೇಶ

**ಮಂ**ಗಳೂರಿನ ರಾಮಕೃಷ್ಣ ಮಠವು ಆಗಸ್ಟ್ ೨೭ ಮತ್ತು ೨೮ ರಂದು ಯುವಸಮಾವೇಶವನ್ನು ಏರ್ಪಡಿಸಿತ್ತು. ಪ್ರತಿದಿನ ೫೫೦ ಕ್ಕೂ ಹೆಚ್ಚು ಯುವಕರು ಇದರಲ್ಲಿ ಪಾಲ್ಗೊಂಡಿದ್ದರು. 'ಅಂತಃಶಕ್ತಿಯನ್ನು ಬೆಳೆಸಿಕೊಳ್ಳುವುದು ಹೇಗೆ?', 'ಪ್ರಾಚೀನ ಭಾರತದ ವೈಜ್ಞಾನಿಕ ಪರಂಪರೆ', 'ಜೀವನವೊಂದು ಕೊಡುಗೆ', 'ವಿದ್ಯಾರ್ಥಿ ಜೀವನದಲ್ಲಿ ಮೌಲ್ಯಗಳು', 'ನಿಮ್ಮ ಅಂತಃಶಕ್ತಿಯನ್ನು ಕಾರ್ಯರೂಪಕ್ಕೆ ತರುವುದು ಹೇಗೆ?' – ಈ ವಿಷಯಗಳ ಮೇಲೆ ಬೆಳಗ್ಗೆಯಿಂದ ಸಂಜೆಯವರೆಗೆ ಭಾಷಣಗಳು, ಕಾರ್ಯಾಗಾರಗಳು ನಡೆದವು. ಸಂಪನ್ಮೂಲ ವ್ಯಕ್ತಿಗಳಾಗಿ, ಸ್ವಾಮಿ ಬೋಧಮಯಾನಂದಜಿ, ಡಾ. ತಿಮ್ಮಪ್ಪ ಹೆಗಡೆ (ಬೆಂಗಳೂರಿನ ನಾರಾಯಣ ಹೃದಯಾಲಯದ ನಿರ್ದೇಶಕರು), ಡಾ. ಮಹಾದೇವನ್ (ಡೀನ್, IIM, ಬೆಂಗಳೂರು), ಪ್ರೊ. ವಿಜಯ್ ( ಬೆಂಗಳೂರಿನ ಮಹಾವೀರ್ ಜೈನ್ ಕಾಲೇಜಿನ ಪ್ರಾಧ್ಯಾಪಕರು) ಮತ್ತು ಶ್ರೀಮತಿ ಸಂಧ್ಯಾ ಪೈ (ಮಣಿಪಾಲದ 'ತರಂಗ' ವಾರಪತ್ರಿಕೆಯ ವ್ಯವಸ್ಥಾಪಕ ಸಂಪಾದಕರು) ಭಾಗವಹಿಸಿದ್ದರು. ಎಲ್ಲ ವಿದ್ಯಾರ್ಥಿಗಳಿಗೂ ಚಹಾ, ಉಪಾಹಾರ ಮತ್ತು ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಭಾಗವಹಿಸಿದ ಯುವಜನರು ಈ ಸಮಾವೇಶವನ್ನು ಯೋಜಿಸುವಲ್ಲಿ ಆಶ್ರಮದ ಪ್ರಯತ್ನವನ್ನು ಶ್ಲಾಘಿಸಿದರು; ಇನ್ನು ಮುಂದೆಯೂ ಈ ಬಗೆಯ ಕಾರ್ಯಗಳ ಆವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು. ಕಡೆಯ ದಿನ ಶ್ರೀಮತಿ ಸಂಧ್ಯಾ ಪೈ ಅವರು ಬಡ ಪ್ರತಿಭಾಶಾಲಿ ವಿದ್ಯಾರ್ಥಿಗಳಿಗೆ ಒಂದು ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ವಿದ್ಯಾರ್ಥಿವೇತನವನ್ನು, ಮಂಗಳೂರು ರಾಮಕೃಷ್ಣ ಮಠದ ಪರವಾಗಿ ವಿತರಿಸಿದರು.




ಸ್ವಾಮಿ ಬೋಧಮಯಾನಂದಜಿ ಕಾರ್ಯಾಗಾರವನ್ನು ನಡೆಸುತ್ತಿರುವುದು

Managing Editor : Swami Nityasthananda Editor : Swami Vireshananda

Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.